<u>ಸಿವಿಲ್_ನ್ಯಾಯಾಧೀಶರು_ಮತ್ತು_ಜೆಎಂಎಫ್‌ಸಿ_ನ್ಯಾಯಾಲಯ,_ಅರಕಲಗೂಡು</u>

**<u>ಸಿ ಸಿ ನಂ.59/2019</u>**

| | | | | |
|---|---|---|---|---|
| ಸಾಕ್ಷಿಯ ಹೆಸರು | ಃ ರೇವಮ್ಮ | ದಿನಾಂಕ | ಃ | 22/01/2021 |
| ಗಂಡ/ತಂದೆಯ ಹೆಸರು | ಃ ಈರೇಗೌಡ | ಸಿ ಡಬ್ಲ್ಯೂ | ಃ | 01 |
| ವಯಸ್ಸು | ಃ 45 ವರ್ಷ | ಪಿ ಡಬ್ಲ್ಯೂ | ಃ | 01 |
| ಉದ್ಯೋಗ | ಃ ಮನೆಗೆಲಸ | | | |
| ವಿಳಾಸ | ಃ ನೈಗೆರೆ ಗ್ರಾಮ | | | |

ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ_ವಿಚಾರಣೆ_ಸಸಅರವರಿಂದ_</u>

1 ನೇ ಆರೋಪಿ ನನ್ನ ಭಾವ. 2 ರಿಂದ 5 ಅವರ ಮಕ್ಕಳು. ಈಗ್ಗೆ 2 ವರ್ಷದ ಹಿಂದೆ ದೀಪಾವಳಿ ದಿನದಂದು ನೈಗೆರೆಗೆ ಹಬ್ಬ ಮಾಡಲು ಹೋಗಿದ್ದೆವು. ಆಗ ಮಧ್ಯಾಹ್ನ 1.00 ರಿಂದ 1.30 ಗಂಟೆ ಸುಮಾರಿಗೆ ನಾನು 1 ನೇ ಆರೋಪಿಗೆ ನಮ್ಮ ಜಮೀನು ಚಾನಲ್ ಗೆ ಹೋಗಿರುವ ವಿಚಾರಕ್ಕೆ ಸಂಬಂದಿಸಿದಂತೆ ಪರಿಹಾರದ ಹಣವನ್ನು ಪಡೆದಿದ್ದು ಅದನ್ನು ನನಗೆ ಕೊಡುವಂತೆ ಕೇಳಿದ್ದೆ. ಆಗ ಆರೋಪಿತರೆಲ್ಲರೂ ನಮ್ಮ ಮನೆಗೆ ನುಗ್ಗಿ ನನ್ನನ್ನು ಹಿಡಿದುಕೊಂಡು ಹಲ್ಲೆ ಮಾಡಿದರು. 1 ನೇ ಆರೋಪಿ ದೊಣ್ಣೆಯಿಂದ ನನ್ನ ಬೆನ್ನಿಗೆ ತೊಡೆಗೆ ಹಲ್ಲೆ ಮಾಡಿರುತ್ತಾರೆ. 2 ಮತ್ತು 3 ನೇ ಆರೋಪಿತರು ಕಾಲಿನಿಂದ ಹೊಟ್ಟೆಗೆ ಒದ್ದರು. 4 ನೇ ಆರೋಪಿ ತಲೆಕೂದಲನ್ನು ಹಿಡಿದು ಎಳೆದಾಡಿದರು, ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದರು. ಹಲ್ಲೆಯಿಂದಾಗಿ ನನಗೆ ರಕ್ತಸ್ರಾವವಾಯಿತು ಮತ್ತು ತೊಡೆನೋವು ಆಗಿತ್ತು. ಗಲಾಟೆಯಾದಾಗ ಚಾಸಾ 2 ಇದ್ದರು. ಚಾಸಾ 2 ಜಗಳ ಬಿಡಿಸಿದ. ಸುಜಾತ ಎಂಬುವರು ಜಗಳ ಬಿಡಿಸಿದರು. ನಂತರ ಅರಕಲಗೂಡು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆ. ಹೆಚ್ಚಿನ ಚಿಕಿತ್ಸೆಗೆ ಹಾಸನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿದೆ. ಆ ದಿನ ಆರೋಪಿತರು ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದಲೇ ಹಲ್ಲೆ ಮಾಡಿರುತ್ತಾರೆ. ಸದರಿ ದೊಣ್ಣೆಯನ್ನು ಎಂ ಓ 1 ಎಂದು ಗುರುತಿಸಲಾಯಿತು. ಈ ಬಗ್ಗೆ ದೂರು ಕೊಟ್ಟಿರುತ್ತೇನೆ. ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಮರುದಿನ ದೂರು ಕೊಟ್ಟಿರುತ್ತೇನೆ. ನಾನು ಅರಕಲಗೂಡು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾಗ 5 ನೇ ಆರೋಪಿ ಸುನೀಲ್ ರವರು ನನಗೆ ಅವಾಚ್ಯ ಶಬ್ದಗಳಿಂದ ಬೈದರು. ಪೊಲೀಸರಿಗೆ ದೂರವಾಣಿ ಮೂಲಕ ವಿಚಾರ ತಿಳಿಸಿದಾಗ ಆತ ಓಡಿಹೋದ.

ದೂರು ಕೊಟ್ಟ ನಂತರ ಪೊಲೀಸರು ಆಸ್ಪತ್ರೆಯ ಹತ್ತಿರ ಬಂದು ಹೆಚ್ಚಿನ ಚಿಕಿತ್ಸೆಗೆ ಹಾಸನಕ್ಕೆ ಕರೆದುಕೊಂಡರು. ಸಾಕ್ಷಿಗೆ ಮಹಜರ್ ತೋರಿಸಲಾಗಿ ಮಹಜರ್ ನಲ್ಲಿ ತನ್ನ ಸಹಿ ಗುರುತಿಸಿದ್ದು ಸಮಹಜರನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಪೊಲೀಸರು ಆಸ್ಪತ್ರೆಯಲ್ಲಿ ಸಹಿ ಪಡೆದರು. ಗಲಾಟೆಯ ಮಾರನೇ ದಿನ ಸಹಿ ಮಾಡಿರುತ್ತೇನೆ. ಸಹಿ ಮಾಡಿದ ಸಮಯ ನೆನಪಿಲ್ಲ. ನನ್ನ ಜೊತೆ ಚಾಸಾ 3 ಮತ್ತು 4 ಸಹಿ ಮಾಡಿರುತ್ತಾರೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಮಹಜರ್ ನಲ್ಲಿ ತನ್ನ ಸಹಿ ಗುರುತಿಸಿದ್ದು ಸಮಹಜರನ್ನು ನಿಪಿ 3 ಎಂದು ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಅದಕ್ಕೂ ಸಹ ಚಾಸಾ 3 ಮತ್ತು 4

ಠಾಣೆಯಲ್ಲಿ ಸಹಿ ಮಾಡಿರುತ್ತಾರೆ. ಮಹಜರ್ ಗಳಲ್ಲಿ ನನಗೆ ಹೊಡೆದ ಬಗ್ಗೆ ಬರೆದುಕೊಂಡಿರುತ್ತಾರೆ. ನನ್ನ ವಾಸದ ಮನೆ ನನ್ನ ಮಾವ ದೇವೇಗೌಡರ ಹೆಸರಿಗೆ ಇದೆ. ಈ ಬಗ್ಗೆ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟನ್ನು ನಿಪಿ 4 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಮಾನ್ಯ ಸಸಅರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು )

ಪಾಟೀ ಸವಾಲು ಃ ಸಸಅರವರಿಂದ,

ದಿಃ06/11/2018 ರಂದು ಮಧ್ಯಾಹ್ನ 2.00 ಗಂಟೆಯಲ್ಲಿ ಗಲಾಟೆಯಾಯಿತು ಎನ್ನುವುದು ಸರಿ. ಘಟನೆಯಾದ 2 ದಿನದ ನಂತರ ದೂರು ಕೊಟ್ಟಿದ್ದು ಚಿಕಿತ್ಸೆ ಪಡೆಯುತ್ತಿದ್ದ ಕಾರಣ ತಡವಾಗಿ ದೂರುಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ದಿನಾಂಕ 09.11.2018 ರಂದು ನಾನು ಸ್ಥಳ ತೋರಿಸಿದಾಗ ನಮ್ಮ ವಾಸದ ಮನೆಯಲ್ಲಿ ನಿಪಿ 2 ರಂತೆ ನನ್ನ ಮತ್ತು ಚಾಸಾ 3 ಮತ್ತು 5 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಹಜರ್ ಮಾಡಿದರು ಎಂದರೆ ಸರಿ.

ದಿನಾಂಕ 09.11.2018 ರಂದು ಮಧ್ಯಾಹ್ನ 12.00 ರಿಂದ 1.00 ಗಂಟೆ ಸುಮಾರಿಗೆ ಮಾಡಿದಂತಹ ನಿಪಿ 3 ಮಹಜರ್ ಗೆ ಆಸ್ಪತ್ರೆಯಲ್ಲಿ ಚಾಸಾ 3 ಮತ್ತು 5 ರವರು ಆಸ್ಪತ್ರೆಯಲ್ಲಿ ಸಹಿ ಮಾಡಿದರು ಸರಿ. ಸಾಕ್ಷಿಯು ಮುಂದುವರೆದು ಜಮೀನಿನಲ್ಲಿ ಪೈಪ್ ಕೆಲಸ ಮಾಡುತ್ತಿದ್ದರು.

ಈ ಹಂತದಲ್ಲಿ ಶ್ರೀ ಡಿ ಆರ್ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು